# CHAPTER -8

ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

1. ಜೀವಕೋಶಗಳು ಒಂದೇ ರೀತಿಯಾಗಿ ಕಂಡರೂ ಸಂಪೂರ್ಣವಾಗಿ ಮೂಲದಂತೆಯೇ ಇರುವುದಿಲ್ಲ, ಕಾರಣ

   A) DNA ಸ್ವಪ್ರತೀಕರಣದಲ್ಲಿನ ಭಿನ್ನತೆಗಳು B) ಗ್ರಹಣದ ಪರಿಣಾಮಗಳು

   C) RNA DNA ಆಗಿ ಬದಲಾಗುವುದರಿಂದ D) ರಿವರ್ಸ್ ಟ್ರಾನ್ಸ್ಕ್ರಿಪ್ಟೇಸ್ ಕಿಣ್ವದ ಪರಿಣಾಮ

2. ಅಂಡವು ಅಂಡಾಶಯದಿಂದ ಈ ಅಂಗದ ಮೂಲಕ ಗರ್ಭಕೋಶಕ್ಕೆ ಸಾಗಿಸಲ್ಪಡುತ್ತದೆ.

   A) ಗರ್ಭಕೋಶ B) ಫೆಲೋಪಿಯನ್ ನಾಳ

   C) ಅಂಡಾಶಯ D) ಯೋನಿ

3. ಮನುಷ್ಯರಲ್ಲಿ ಕಂಡು ಬರುವ ಒಟ್ಟು (2n) ವರ್ಣತಂತುಗಳ ಸಂಖ್ಯೆ

   A) 23 B) 46 C) 92 D) 11

4. ಸಸ್ಯಗಳಲ್ಲಿ ಗಂಡು ಸಂತಾನೋತ್ಪತ್ತಿಯ ಅಂಗ ಎಂದರೆ

   A) ಕೇಸರ B) ಅಂಡಾಶಯ C) ಪರಾಗರೇಣು D) ಪರಾಗ ನಳಿಕೆ

5. ಬೆಳೆಯುತ್ತಿರುವ ಭ್ರೂಣವು ತಾಯಿಯ ದೇಹದಿಂದ ಈ ರಚನೆಯ ಮೂಲಕ ಪೋಷಣೆ ಪಡೆಯುತ್ತದೆ.

   A) ಗರ್ಭಕೋಶ B) ಫೆಲೋಪಿಯನ್ ನಾಳ

   C) ಅಂಡನಾಳ D) ಜರಾಯು

6. ಈ ಕೆಳಗಿನವುಗಳಲ್ಲಿ ಯಾವುದು ಲೈಂಗಿಕ ವಿಧಾನದಿಂದ ಹರಡದ ರೋಗ ಅಲ್ಲ.

   A) ಗೊನೋರಿಯಾ B) ಸಿಫಿಲಿಸ್ C) ಏಡ್ಸ್ D) ಮಲೇರಿಯಾ

7. ಈ ಕೆಳಗಿನವುಗಳಲ್ಲಿ ಯಾವುದು/ವು ಗರ್ಭಧಾರಣೆಯನ್ನು ತಡೆಯುವ ವಿಧಾನ/ಗಳಾಗಿವೆ.

   A) ಕಾಂಡೋಮ್ ಧರಿಸುವುದು B) ಮಾತ್ರೆಗಳ ಬಳಕೆ

   C) ವಂಕಿ/ ಕಾಪರ್-ಟಿ ಅಳವಡಿಕೆ D) ಎಲ್ಲವೂ

8. ಗಾಳಿ, ನೀರು ಅಥವಾ ಪ್ರಾಣಿಗಳಂತಹ ಮಾಧ್ಯಮಗಳ ಮೂಲಕ ಪರಾಗಸ್ಪರ್ಶ ಕ್ರಿಯೆ ನಡೆದರೆ,

   A) ಸ್ವಕೀಯ ಪರಾಗಸ್ಪರ್ಶ ಕ್ರಿಯೆ B) ಪರಕೀಯ ಪರಾಗಸ್ಪರ್ಶ ಕ್ರಿಯೆ

   C) ಆಂತರಿಕ ಪರಾಗಸ್ಪರ್ಶ ಕ್ರಿಯೆ D) ಯಾವುದು ಅಲ್ಲ

9. ಪುರುಷರಲ್ಲಿ ವೀರ್ಯಾಣುಗಳು ಉತ್ಪತ್ತಿಯಾಗುವುದು ಈ ರಚನೆಗಳಲ್ಲಿ

   A) ವೀರ್ಯನಾಳ B) ಪ್ರೋಸ್ಟೇಟ್ ಗ್ರಂಥಿ C) ವೃಷಣಗಳು D) ಶಿಶ್ನ

10. ಹುಡುಗಿಯರಲ್ಲಿ ವಯಸ್ಕ ಹೆಂಗಸರ ಗುಣಲಕ್ಷಣಗಳು ಕಾಣಿಸಿಕೊಳ್ಳಲು ಈ ಹಾರ್ಮೋನ್ ಕಾರಣ

    A) ಟೆಸ್ಟೋಸ್ಟಿರಾನ್ B) ಪ್ರೊಜೆಸ್ಟಿರಾನ್ C) ಅಡ್ರಿನಲಿನ್ D) ಥೈರಾಕ್ಸಿನ್

LIVEWORKSHEETS

# CHAPTER -9

**ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

1. ಆಧುನಿಕ ತಳಿ ವಿಜ್ಞಾನದ ಪಿತಾಮಹ ಎಂದು ಇವರನ್ನು ಕರೆಯುತ್ತಾರೆ.

   A) ಮೆಂಡಲೀವ್ B) ನ್ಯೂಟನ್ C) ಮೆಂಡಲ್ D) ಮೈಕಲ್ ಫ್ಯಾರಡೆ

2. ಏಕತಳೀಕರಣದ ವ್ಯಕ್ತರೂಪ ಅನುಪಾತವನ್ನು ಶೇಕಡದಲ್ಲಿ ಬರೆದಾಗ

   A) 75:25 B) 25:75 C) 50:50 D) 80:20

3. F1 ತಳಿಯಲ್ಲಿ ಯಾವಾಗಲೂ ಈ ಗುಣ ಮಾತ್ರ ವ್ಯಕ್ತವಾಗುತ್ತದೆ.

   A) ದುರ್ಬಲ B) ತಟಸ್ಥ C) ಪ್ರಬಲ D) ಎಲ್ಲವೂ

4. ಮುಂದಿನ ಪುನೆಟ್ ಚೌಕವನ್ನು ಗಮನಿಸಿ, X ಸ್ಥಾನದಲ್ಲಿ ಇದನ್ನು ಬರೆಯಬೇಕು

   A) Tt B) TT C) tt D) ಯಾವುದು ಅಲ್ಲ

| ಲಿಂಗಾಣುಗಳು | T | t |
|---|---|---|
| T | TT | Tt |
| t | Tt | X |

5. ತಂದೆಯಿಂದ ಅನುವಂಶೀಯವಾಗುವ ಈ ವರ್ಣತಂತು ಗಂಡು ಮಗುವಿನ ಜನನಕ್ಕೆ ಕಾರಣವಾಗುವುದು.

   A) X B) Y C) XX D) ಎಲ್ಲವೂ

6. ಗುಣಗಳ ಅನುವಂಶೀಯತೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ.

   A) ಜೀವಿತಾವಧಿಯಲ್ಲಿ ಜೀವಿಯು ಪಡೆದ ಅನುಭವಗಳ ವರ್ಗಾವಣೆಯಿಂದ

   B) ಅಲೈಂಗಿಕ ಅಂಗಾಂಶ/ ಅಂಗದಲ್ಲಾಗುವ ಬದಲಾವಣೆಯಿಂದ

   C) DNA ಸ್ವಪ್ರತೀಕರಣ ಸಂದರ್ಭದಲ್ಲಿನ ಭಿನ್ನತೆಗಳು D) ಯಾವುದೂ ಅಲ್ಲ

7. ಹಕ್ಕಿಯ ರೆಕ್ಕೆ ಮತ್ತು ಬಾವಲಿಯ ರೆಕ್ಕೆಗಳು ಈ ವಿಧದ ಅಂಗಗಳಿಗೆ ಉದಾಹರಣೆಯಾಗಿವೆ.

   A) ರಚನಾನರೂಪಿ ಅಂಗಗಳು B) ಕಾರ್ಯಾನುರೂಪಿ ಅಂಗಗಳು

   C) ಮೂಲರೂಪಿ ಅಂಗಗಳು D) ಎಲ್ಲವೂ

8. ಸತ್ತ ಜೀವಿಗಳ ಸಂರಕ್ಷಿಸಲ್ಪಟ್ಟ ಅವಶೇಷಗಳಿಗೆ ಹೀಗೆಂದು ಕರೆಯುವರು.

   A) ಉಳಿಕೆ B) ಪಳೆಯುಳಿಕೆ C) ಸಂರಕ್ಷಣೆ D) ದಿಕ್ಸೂಚಿ

9. ಪಳೆಯುಳಿಕೆಗಳ ಕಾಲ ನಿರ್ಣಯ ಮಾಡಲು ಈ ಸಮಸ್ಥಾನಿಯನ್ನು ಬಳಸುತ್ತಾರೆ.

   A) ಕಾರ್ಬನ್ B) ಸಿಲಿಕಾನ್ C) ರಂಜಕ D) ಯುರೇನಿಯಂ

10. ಎಲ್ಲಾ ಮಾನವರು ಈ ಪ್ರಭೇದಕ್ಕೆ ಸೇರಿದವರು.

    A) ಹೋಮಿನಿಡೆ B) ಪ್ರೈಮೇಟ್ C) ಹೋಮೋ ಸೆಪಿಯನ್ D) ಎಲ್ಲವೂ

LIVEWORKSHEETS